
REVIEW OF RESEARCH
ISSN: 2249-894X
IMPACT FACTOR : 5.7631(UIF)
UGC APPROVED JOURNAL NO. 48514
VOLUME - 8 | ISSUE - 9 | JUNE - 2019

# ವಚನ ಸಾಹಿತ್ಯದಲ್ಲಿ ಜನಪದ ಕಲೆಗಳು

ಡಾ. ಸುವರ್ಣ ಎಂ. ಹಿರೇಮಠ
ಅತಿಥಿ ಪ್ರಾಧ್ಯಾಪಕರು , ಕನ್ನಡ ಅಧಯ್ಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ,ಕಲಬುರಗಿ.



'ಆನು ಒಲಿದಂತೆ ಹಾಡುವೆನಯ್ಯ' ಎಂದು ಹೇಳಿದ ಶಿವಶರಣರು ತಾವು ಒಲಿದಂತೆ ಹಾಡಿ, ಸ್ವಚ್ಛಂದ ಮನದಿಂದ ಕುಣಿದು, ದೇಶಿ ಸಂಪ್ರದಾಯಕ್ಕೆ ಅಡಿಪಾಯ ಹಾಕಿ, ಜನಪದ ಕಲೆಗಳಿಗೆ ಉಸಿರು ನೀಡಿದವರು. ಸತ್ಯ ಶುದ್ಧ ಆಚರಣೆಯಿಂದ ಸರ್ವ ವೃತ್ತಿಗಳು ಕಾಯಕವೆನಿಸಿದಂತೆ, ಸರ್ವ ಕಲೆಗಳು ಕಾಯಕವೆನಿಸಿದವು. ಕಲೆಗಳನ್ನು ಕಾಯಕದ ಮಟ್ಟಕ್ಕೇರಿಸಿ ಶರಣರು ಅವುಗಳನ್ನು ಉಳಿಸಿ ಬೆಳೆಸಿದರು.

ನೃತ್ಯ, ಸಂಗೀತ, ವಾದ್ಯ, ನಾಟಕ, ಗಮಕ, ಹಾಸ್ಯ ಮುಂತಾದ ಎಲ್ಲಾ ಕಲೆಗಳಲ್ಲಿಯೂ ಶರಣರು ಬಲ್ಲಿದರಾಗಿದ್ದರು. ಜನಪದ ಕಲೆ ಸಂಬಂಧಿತ ವೃತ್ತಿಯಲ್ಲಿ ನಿರತರಾದವರ ಹೆಗ್ಗಳಿಕೆಯೆಂದರೆ ಇಂತಹದ್ದೇ ಜಾತಿ–ಜನಾಂಗ–ಗುಂಪಿನವರ ಮುಂದೆಯೇ ತಮ್ಮ ಕಲೆಯನ್ನು ಪ್ರದರ್ಶಿಸಬೇಕೆಂಬ ನಿಯಮಕೋಳಗಾದವರಲ್ಲ. ಕಲೆಯ ಆಸ್ವಾದಕರೇ ಶರಣರಿಗೆ ಮುಖ್ಯರಾಗಿದ್ದರು. ನಟನೆಯಲ್ಲಿ ತನ್ನ ಅರ್ಧಾಂಗಿಯನ್ನೇ ಸೋಲಿಸಿ ಶಿವನು ನಟರಾಜ ಎನಿಸಿಕೊಂಡರೆ, ಶರಣರು ನೃತ್ಯದಲ್ಲಿ ಶಿವನನ್ನೇ ಸೋಲಿಸಿ ಜನಮನ ಗೆದ್ದಿದ್ದಾರೆ. ಭಕ್ತಿ, ಪ್ರೀತಿಗಾಗಿ ತಾವು ನಂಬಿದ ದೈವಕ್ಕೆ ಅಧೀನವಾದರೂ ವೇಷ–ಹಾಸ್ಯ, ನೃತ್ಯ, ಸಂಗೀತಾದಿ ಕಲೆಗಳೊಂದಿಗೆ ಶರಣರು ಎಂದಿಗೂ ರಾಜಿ ಮಾಡಿಕೊಳ್ಳಲಿಲ್ಲ. ಸಾಮಾನ್ಯವೆನಿಸಿದ್ದ ಜನಪದ ಕಲೆಗಳಿಗೆ ಶಿವಶರಣರು ಪುನರುಜ್ಜೀವನ ನೀಡಿ, ಸಮಾಜದಲ್ಲಿ ಘನತೆಯ ಸ್ಥಾನ ಒದಗಿಸಿಕೊಟ್ಟಿದ್ದಾರೆ.

## 1. ನೃತ್ಯ ಪ್ರಸಂಗಗಳು:

ಮಾನವನ ಸಹಜ ಸ್ಪಂದನವೇ ಕುಣಿತ ಅಥವಾ ನೃತ್ಯ ಎನಿಸಿಕೊಳ್ಳುತ್ತೇದೆ. ಅಂಗಿಕ ಚಲನವಲನದಲ್ಲಿಯೇ ನೃತ್ಯದ ಹಲವು ಅಂಶಗಳಿರುವುದು ಗೊತ್ತಿರುವ ಸಂಗತಿಯಾಗಿದೆ. ನೃತ್ಯ ಮಾಡುವವನನ್ನು 'ನಟ್ಟುವ' ಅಥವಾ 'ನಟ್ಟುವಿಗ' ಎಂದು ವಚನಗಳು ಕರೆದಿವೆ. ನಟ್ಟುವರು ಮೂಲತ: ಅಲೆಮಾರಿಗಳು ಹೊಟ್ಟೆ ಪಾಡಿಗಾಗಿ ಊರೂರು ಸುತ್ತುತ್ತಾ ನಟನೆಯನ್ನು ಪ್ರದರ್ಶಿಸಿ ಮನೋರಂಜನೆ ನೀಡುವುದೇ ಅವರ ವೃತ್ತಿಯಾಗಿದೆ. ಅಲ್ಲಮಪ್ರಭು ನಟವ ಜಾತಿಯವನೆಂದೂ ಅವನ ತಂದೆ ನಾಗವಾಸಾಧಿಪತಿಯೆಂದೂ ಹರಿಹರನ 'ಪ್ರಭುದೇವರ ರಗಳೆ' ಕರೆದಿದೆ. ನಟನೆ ಮಾಡುವವರನ್ನು ನಟರು, ನಟುವಾಂಗ, ನಟವರ್ಗ ಎಂಬ ಕುಲ ವೃತಿಗಳಿಂದ ಕರೆಯುವುದು ಅಂದು ರೂಢಿಯಲ್ಲಿತ್ತು. ಜನತೆ ನೀಡಿದ ಹಣದಿಂದಲೇ ಜೀವನ ಸಾಗಿಸುವುದು ನಟುವರರ ದಿನಚರಿಯಾದರೂ ಧರ್ಮ, ನೀತಿ, ತತ್ವ ಪ್ರಚಾರದ ದೃಷ್ಟಿಯಿಂದ ಅವರ ಸೇವೆ ಅಪಾರ.

ವಚನಗಳಲ್ಲಿ ಉಲ್ಲೇಖಗೊಂಡ ಆಡು ಎಂಬ ಕ್ರಿಯಾಪದವು ನೃತ್ಯ ಮಾಡು, ನರ್ತಿಸು ಎಂಬುದಕ್ಕೆ ಸಂವಾದಿಯಾಗಿ ಬಳಕೆಗೊಂಡಿದೆ. ನರ್ತನ ಕ್ರಿಯೆಯ ಒಂದು ಭಾವ, ಉದ್ದೇಶವನ್ನು ಹೊಂದುವುದರ ಜೊತೆಗೆ ಆಡು ಪದವು ಒಂದು ಕಥಾ ಪ್ರಸಂಗದ ಅಭಿನಯ ರೂಪಿ ಸನ್ನಿವೇಶವೆಂದು ಅರ್ಥೈಸುತ್ತದೆ. ಶಿವಭಕ್ತ ಪಾರಮ್ಯದ ಅಂಗಿಕ ಚಲನವಲನೆಗಳೇ ಶಿವಶರಣರಿಗೆ ನೃತ್ಯವಾಗಿ ತೋರಿವೆ. ಅದನ್ನು ತಮ್ಮ ಸ್ವಾಮಿಗೆ ಸಮರ್ಪಿಸುವ ಹೃದ್ಯ ಚಿತ್ರಗಳನ್ನು ವಚನಗಳು ಹೀಗೆ ಕಟ್ಟಿ ಕೊಡುತ್ತವೆ.

**"ಆನಂದದಿಂದ ನಲಿ ನಲಿದಾಡುವೆನು**
**ಆನಂದದಿಂದ ಕುಣಿ ಕುಣಿದಾಡುವೆನು**
**ಕೂಡಲಸಂಗನ ಶರಣರು ಬಂದಡೆ**
**ಉಬ್ಬಿ ಕೊಬ್ಬಿ ಹರುಷದ ಲೋಲಾಡುವೆ"**

**"ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಂಗೆ**
**ಗೀತವಾದ್ಯ ನೃತ್ಯವ ಮಾಡಿ ಮೆಚ್ಚಿಸುವ**
**ಗಣಂಗಳಿಗೆ**
**ನಮೋ ನಮೋ ಎಂಬೆನು"**

**'ಆಡಿರಯ್ಯಾ ಹಾಡಿರಯ್ಯಾ ಮನ ಬಂದ**
**ಪರಿಯಲಿ**
**ಶಿವಶರಣರ ಮುಂದೆ ಆಡಿಹರಯ್ಯಾ**
**ಹಾಡಿಹರಯ್ಯಾ'**

ಭಕ್ತಿ, ಆನಂದದಿಂದ ಹಿನ್ನಲೆಯಲ್ಲಿ ಪ್ರಚುರಗೊಂಡ ನೃತ್ಯ ಕಲೆಗೆ ಗೀತವಾದ್ಯಗಳು ಸೇರಿಕೊಂಡರೆ ಹಚ್ಚಿನ ಮೆರಗು ಬರುತ್ತದೆ. ರಾಗ ರಂಜನೆಗೆ ಜನ ಮೆಚ್ಚುತ್ತದೆ. ಅಂತಹ ಕಾರ್ಯವನ್ನು ಮಾಡುವ ಗಣಗಳಿಗೆ ಉರಿಲಿಂಗ ಪೆದ್ದಿ ನಮೋ ನಮೋ ಎಂದಿರುವನು. ದೈವಾರಾಧನೆಯ ನೆಲೆಯಲ್ಲಿ ನಟನಾ ಕಲೆ ಹೆಚ್ಚಿನ ಮಹತ್ವ ಪಡೆದುಕೊಂಡಿತು. ನಟನೆಗೆ ದೇವಾಲಯವೇ ಮುಕ್ತ ವೇದಿಕೆಯಾಗಲು ಕಾರಣ. ಪ್ರಭುತ್ವದ ಯಾವ ಹಿಡಿತಗಳು ಅಲ್ಲಿರಲಿಲ್ಲ. ಶಿವನ

ಬಹುತೇಕ ಲೀಲೆಗಳು ನೃತ್ಯದ ಹಿನ್ನೆಲೆಯಲ್ಲಿ ಕಂಡು ಬರುತ್ತದೆ.

ಗುಪ್ತ ಭಕ್ತಿಯವಳಾದ ಕಾರಿಕಾಲಮ್ಮೆ ಕಂಚಿಯ ಕಾನನದಲ್ಲಿ ಶಿವನ ತಾಂಡವ ನೃತ್ಯ ವೀಕ್ಷಿಸಿದಳೆಂದು ಕಾರಿಕಾಲಮ್ಮೆಯ ರಗಳೆಯಿಂದ ತಿಳಿದುಬರುತ್ತದೆ. ಶಿವ ತಾಂಡವ ನೃತ್ಯ ಮಾಡಲು, ಗಗನದವರೆಗೂ ಬೆಳೆದು ನಿಲ್ಲಲು ಆತನ ಜಡೆಗಳೂ ನಭೋ ಮಂಡಲದಲ್ಲಿ ಹರಡಿ, ಅದರಲ್ಲಿದ್ದ ಹಾವುಗಳೂ ಹೆಡೆ ಬಿಚ್ಚಿ ನರ್ತಿಸಲಾರಂಭಿಸಿದವು. ಕೈಗಳ ಮೂಲಕ ಶಿವನು ವೈವಿಧ್ಯಮಯವಾದ ನಟನೆಯನ್ನು ಪ್ರದರ್ಶಿಸುತ್ತಿದ್ದರೆ ಅವು ಎಂಟು ದಿಕ್ಕುಗಳಲ್ಲಿ ಚಲಿಸುವಂತೆ ಭಾಸವಾಗುತ್ತಿತ್ತೆಂದು ಹರಿಹರ ಬಣ್ಣಿಸುತ್ತಾನೆ.

ಮಡಿಕೆಯ ಸುನಾದಕ್ಕೆ ಮರಳಾಗಿ ಶಿವನು ಕುಣಿದ ಸನ್ನಿವೇಶ ಕುಂಬಾರ ಗುಂಡಯ್ಯನ ರಗಳೆಯಲ್ಲಿದೆ.

**ಕುಣಿದಾಡುತೆ ಮಡಕೆಗಳಂ ಬಾರಿಸಿ**
**ಕುಣಿದಾಡುತೆ ಕುಡಿಕೆಗಳಂ ಬಾರಿಸಿ**
**ಶಿವನಂ ಸುತ್ತಿ ಬರುತಂ ಬಾರಿಸಿ**
**ಭವನಂ ಬಲವಂದೊಲವಿಂ ಬಾರಿಸಿ**
**ಕುಣಿವುತೆ ಕೊರಲೆತ್ತುತೆ ನೆರೆ ತೂಗುತೆ**
**ಮಣಿವುತೆ ತೂಗಾಡುತೆ ಸುಖಿಯಾಗುತೆ**
**ಆಡುವ ಗುಂಡಯ್ಯನ ಹೊಸ ನೃತ್ಯಂ**
**ನೋಡುವ ಶಿವನಂ ಮುಟ್ಟಿತು ಸತ್ಯಂ**

ಗುಂಡಯ್ಯನ ಮಡಕೆಯ ನಾದದ ಜೊತೆಗೆ ಸುರಲೋಕದ ವಾದ್ಯಗಳೂ ಹಿಮ್ಮೇಳವಾಗುವುದು, ಗಣಪತಿ ಮೊದಲಾದ ಗಣಗಳು ನರ್ತಿಸುವುದು ಕಂಡು ಬರುತ್ತದೆ.

ಸಂಗೀತ ವಾದ್ಯಗಳಲ್ಲಿ ಪ್ರವೀಣಳಾದ ಸಿದ್ದ ದೇವಮ್ಮ ತಾಳ ಸಹಿತವಾದ ರಾಗವನ್ನು ನಿಚ್ಚವೂ ಲಿಂಗಕ್ಕೆ ಕೇಳಿಸಿ ಶಿವಕೃಪೆ ಪಡೆದಳೆಂದು ಪುರಾಣಗಳು ಬಣ್ಣಿಸುತ್ತವೆ. ವರವೂರ ಮಲ್ಲಪ್ಪ ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ನೃತ್ಯ ಮಾಡುತ್ತಿದ್ದನು ಎಂಬ ಪ್ರತೀತಿಯಿದೆ.

## 2. ಕಲಕೇತರಾಟ:

ಕಲಕೇತ ಅಥವಾ ಕಲಹಕೇತ ಎಂದರೆ ವೇಷಧಾರಿಯಾಗಿ ಹಣ ಸಂಪಾದಿಸುವವನು. ಕಲ್ಲಿನಿಂದ ಎದೆಗೆ ಬಡಿದುಕೊಂಡು ಭಿಕ್ಷೆ ಕೇಳುವವನು ಎಂದರ್ಥಗಳಿವೆ. ವೀರಭದ್ರನ ವೇಷವನ್ನು ಧರಿಸಿ ಕುಣಿದು ಭಕ್ತರನ್ನು ನಲಿಸಿ, ನಗಿಸಿ ಬಂದ ದ್ರವ್ಯದಿಂದ ದಾಸೋಹ ಮಾಡುವವನು ಕಲಕೇತ ಎನ್ನಲಾಗಿದೆ. ಯಾಚಕ ವರ್ಗದ ಒಂದು ವಿಶಿಷ್ಟವೇ ವೃತ್ತಿಯಾಗಿ ಬಳಕೆಯಾಗಿದೆ. ಜಾನಪದ ಕಲೆಯಾದ ಕಿಳ್ಳೇಕೇತರ ಆಟದಂತೆ ಇದೊಂದು ಪ್ರದರ್ಶನ ಕಲೆಯಾಗಿದೆ.

ಕಲಕೇತ ವೇಷಧಾರಿಯನ್ನು ಬಸವ ಪುರಾಣವು ಮಾರ್ಮಿಕವಾಗಿ ಚಿತ್ರಿಸಿದೆ. ಬಣ್ಣ ಬಣ್ಣದ ಉಡುಪು, ಮುಂದಲೆಯಲ್ಲಿ ಕೂದಲಿನ ಮುಡಿ, ಹಣೆಯಲ್ಲಿ ವಿಭೂತಿ, ಕಿವಿಯಲ್ಲಿ ಕೆಂದಳಿರು, ಎಡಗಾಲಿಗೆ ಅಂದುಗೆ, ಬಲಗಾಲಲ್ಲಿ ಗೆಜ್ಜೆ, ಎಡಗೈಯಲ್ಲಿ ದಕ್ಷನ ಕುರಿದಲೆಯ ತೆರೆದ ಟಗರಿನ ಕೋಡು, ಬಲಗೈಯಲ್ಲಿ ಬೆತ್ತ, ಮೈಮೇಲೆ ಹೊದೆದ ಕಾಗಿನ ಕಪ್ಪಡದ ವೇಷವನ್ನು ಧರಿಸಿ ಜನತೆಗೆ ಮನೋರಂಜನೆ ನೀಡುವುದು. ಊರೂರು ಅಲೆಯುವುದು ಕಲಕೇತ ವೃತಿಯವರ ಬದುಕಾಗಿತ್ತು. ಬೆಡಗು ಬಿನ್ನಾಣಗಳಿಂದ ನರ್ತಿಸುವವಳನ್ನು ಬಿನ್ನಾಣಿಕೆ ಎಂದು ಸಿದ್ಧರಾಮ ಕರೆದಿರುವನು. ಜೋರಾಗಿ ಮಾತನಾಡುತ್ತ ಜನರನ್ನು ರಂಜಿಸುವ ಹೆಣ್ಣು ಮಕ್ಕಳನ್ನು ವೇಷದ ಗೌಳಿಯರೆಂದು ಚೆನ್ನಬಸವಣ್ಣ ಕರೆದಿರವನು. ಈ ವೃತ್ತಿಯನ್ನೇ ಅವಲಂಬಿಸಿದವರು ಇಕ್ಕ ಮಲ್ಲಯ್ಯ, ಕಲಕೇತ ಬ್ರಹ್ಮಯ್ಯ.

ಕಲಕೇತ ಬ್ರಹ್ಮಯ್ಯ ಕಲಕೇತ ವಿದ್ಯವ ಧರಿಸಿ ಮಹಾಶರಣರ ಮನದ ಮಂದಿರದಲ್ಲಿ ನಾನಾ ರೀತಿಯ ಚೇಷ್ಟೇ ಮಾಡುತ್ತ, ರಂಜಿಸುವುದರ ಜೊತೆಗೆ ತಾನು ನಲಿದು ಕುಣಿದಾಡ ಬಂದೆ ಎಂದು ಹೇಳಿಕೊಳ್ಳುತ್ತಾನೆ.

**"ಜಗಕ್ಕಹುದಾದುದ ಕಿತ್ತು ಜಗಕ್ಕೆಲ್ಲವಾದುದು ತೊಟ್ಟು**
**ಜಗ ಹಿಡಿದುದ ಬಿಟ್ಟು,ಜಗ ಬಲ್ಲದುದ ತೊಟ್ಟು**
**ತಾನರಿದುದ ಮರೆದು, ಆ ಮರವೆಗೆ ಒಡಲಾದುದನರಿದು**
**ಉಭಯದ ಕೋಡ ಕಿತ್ತು, ನಲದೊಲವಿನ ಹೊಲನ ಬಿಟ್ಟು**
**ಕೊಂಬಿನ ಗಿಲಿಕೆಯಲ್ಲಿ ಒಲಿದಾಡುವೆ**
**ಜಗಭಂಡರ ಅಂಗಳಲದಲ್ಲಿ ತುಳಿದಾಡುತ್ತಲಿರಬೇಕು**
**ಮೇಖಲೇಶ್ವರಲಿಂಗ ಒಡಗೂಡುತ್ತಲಿರಬೇಕು"**

ತನ್ನ ಕಾಯಕದ ವೇಷಭೂಷಣ ಹಾಗೂ ಉದ್ದೇಶವನ್ನು ತಿಳಿಸುತ್ತಾನೆ. ಜಗದ ಕಣ್ಣಿಗೆ ವಿಲಕ್ಷಣವಾದ ವೇಷ ಧರಿಸುವುದು ತಾನು ಮಾಡುತ್ತಿದ್ದರೂ ಜಗಭಂಡರ ಮನವನ್ನು ಮುತ್ತಿರುವ ವಿಷಯಾದಿಗಳನ್ನು ತುಳಿಯುತ್ತಿದ್ದೇನೆಂದು ಕಲಕೇತ ಬ್ರಹ್ಮಯ್ಯ ತನ್ನ ವೃತ್ತಿ ಉದ್ದೇಶವನ್ನು ಸ್ಪಷ್ಟಪಡಿಸುತ್ತಾನೆ.

ಒಂದು ಸಂದರ್ಭದಲ್ಲಿ/ಪ್ರಸಂಗದಲ್ಲಿ ಬಸವಣ್ಣ ಕಲಕೇತ ಬ್ರಹ್ಮಯ್ಯನನ್ನು ಕುರಿತು ಹೀಗೆ ಹೊಗಳಿದ್ದಾನೆ.

**ಗುಮ್ಮಡಿಯಂತಪ್ಪ ತಾಯಿ ನೋಡೆನಗೆ**
**ಕಲಕೇತನಂತಪ್ಪ ತಂದೆ ನೋಡೆನಗೆ**

ಈ ವಿಷಯವನ್ನು ತಿಳಿದ ಕಿನ್ನರಿ ಬ್ರಹ್ಮಯ್ಯ ಕಲಕೇತಯ್ಯನ ವ್ಯಕ್ತಿತ್ವವನ್ನು ಹಾಗೂ ಕಲಕೇತ ವೃತ್ತಿಯನ್ನು ಗೌರವಿಸುವ ಪ್ರಸಂಗಕ್ಕೆ ಸಾಕ್ಷಿಯಾಗಿ ನಿಲ್ಲುತ್ತಾನೆ.

ಹೀಗೆ ಕಲಕೇತ ಬ್ರಹ್ಮಯ್ಯನು 'ದೇಶಿ ನೃತ್ಯವನ್ನು' ಕಾಯಕದ ಮಟ್ಟಕ್ಕೇರಿಸಿದ ಕೀರ್ತಿಗೆ ಪಾತ್ರನಾಗಿದ್ದಾನೆ. ಅದಕ್ಕೆ ಸಾಮಾಜಿಕ ಮಹತ್ವವನ್ನು ತಂದುಕೊಟ್ಟಿದ್ದಾನೆ. ವೇಷಕ್ಕೆ ತಕ್ಕಂತೆ ನಟನೆ ಇಲ್ಲದಿದ್ದರೆ ಅದು ವ್ಯರ್ಥವೆಂದು ಸಿದ್ಧರಾಮ ತಿಳಿಸಿದ್ದಾನೆ. ಕಲಕೇತ ಕಾಯಕದಲ್ಲಿ ಹಲಗೆ ಬಾರಿಸುತ್ತಿದ್ದ ಇಕ್ಕಮಲ್ಲಯ್ಯ ಜನಪದ ಕಲಾವಿದನಾಗಿದ್ದು, ಶಿವನ ಆಜ್ಞೆಯಂತೆ ಆತ ಕಲಕೇತರಾಟವನ್ನು ಪ್ರದರ್ಶಿಸುತ್ತಿದ್ದನೆಂದು ಪುರಾಣಗಳು ಹೇಳುತ್ತವೆ.

### 3. ಬಹುರೂಪಿಯಾಟ:

ಬಹುರೂಪ ಮನೋರಂಜನೆ ಪ್ರಧಾನವಾದ ವೃತ್ತಿ. ಬಗೆ ಬಗೆಯ ವೇಷಧರಿಸಿ, ನರ್ತನಗೈಯುವ ಇವರನ್ನು ವೇಷಗಾರ, ಜಾತಗಾರ, ಭೈರೂಪಿ, ಬಹುರೂಪಿ ಎನ್ನುವರು. ಅನುವಂಶಿಕವಾಗಿ ಇವರು ಬಹು ರೂಪಿಗಳಾಗಿರುತ್ತಾರೆ. ಅಂದು ಏಕ ವ್ಯಕ್ತಿಯ ತಂಡ ಅಥವಾ ಹಲವಾರು ಜನರನ್ನು ಸೇರಿಸಿ ತಂಡ ಕಟ್ಟುವುದು ರೂಢಿಯಲ್ಲಿತ್ತು. ಇದನ್ನೇ ಬಹುರೂಪಿಗಳ ನಾಟಕ ಎಂದು ಕರೆಯುತ್ತಿದ್ದರು.

ಪೌರಾಣಿಕ ಕಥಾ ಪ್ರಸಂಗಗಳನ್ನಾಯ್ದುಕೊಂಡು ನಾಟಕವನ್ನಾಡುತ್ತಿದ್ದರು. ಅಂದಿನ ಬಹುರೂಪಿಯಾಟದ ಕಲಾವಿದರು ವೇಷತೊಡುವುದು, ನೀಲದ ಉಡಿಗೆ ತೊಡುವುದು, ಮಣಿಮಾಲೆಗಳ ಹಾರ, ಮುತ್ತಿನ ದಂಡೆ ಧರಿಸುವುದು, ಮುಖವಾಡ (ಬಚ್ಚಣಿ) ಧರಿಸುವುದು ಮುಖಕ್ಕೆ ಹೊತ್ತಿಗೊಂದು ಬಣ್ಣ ಬಳಿದು ಕೊಳ್ಳುವುದು ಸಾಮಾನ್ಯವಾಗಿತ್ತು. ವೇಷಗಳನ್ನು 'ಜೋಹ' ವೆಂದು ಕರೆಯುತ್ತಿದ್ದರು.

ಮದ್ದಳೆ, ಕಹಳೆ, ತಾಳ, ವೀಣೆ, ಕೊಳಲು ಮುಂತಾದ ಸಂಗೀತ ವಾದ್ಯಗಳನ್ನು ಆಟದ ಸಂದರ್ಭದಲ್ಲಿ ಬಳಸುತ್ತಿದ್ದರು. ಬಹುರೂಪಿ ಚೌಡಯ್ಯನ ವಚನಗಳಲ್ಲಿ ವೀಣೆಯ ಹೆಸರು ಪ್ರಸ್ತಾಪವಿಲ್ಲ. ಆದರೂ 'ತಂತಿಯ ಹರಿಯಿರೋ' ಎನ್ನುವಲ್ಲಿ ವೀಣೆಯ ಸೂಚನೆ ಕಂಡು ಬರುತ್ತದೆ.

**ಬಂದ ಬಹುರೂಪದಲ್ಲಿ ಸಂದಿಲ್ಲದೆ ಆಟವನಾಡುತ್ತ**
**ಬಂದ ಬಂದವರ ಮೆಚ್ಚಿಸುತ್ತ**
**ಅವರವರಂದಕ್ಕೆ ಕೊಂಡಾಡಿ, ಬಂದುದ ಕೈಕೊಂಡೆ**

ಎಂದು ಬಹುರೂಪಿ ಚೌಡಯ್ಯ ಹೇಳುವಲ್ಲಿ ಒಬ್ಬನೇ ವ್ಯಕ್ತಿ ವಿವಿಧ ವೇಷಗಳನ್ನು ಹಾಕಿಕೊಂಡು ಜನರನ್ನು ಮೆಚ್ಚಿಸುವುದರ ಸೂಚನೆಯಿದೆ.

**ಎಂಬುತ್ತು ನಾಲ್ಕು ಲಕ್ಷ ಬಹುರೂಪ**
**ಚಂದ ಚಂದದಲ್ಲಿ ಅಡಿ**
**ಬಂಧುಗಳ ಮೆಚ್ಚಿಸ ಬಂದೆ**
**ಅವರು ಬಹುರೂಪದಂದವನರಿಯರು.**

ಎಂಬತ್ತಾಲ್ಕು ಲಕ್ಷ ಜೀವರಾಶಿಗಳ ವ್ಯಾಪಕ ಸಂಕೇತ ಬಹುರೂಪ. ಸಮಗ್ರ ಮಾನವ ಕುಲವ ಮೆಚ್ಚಿಸುವ ಒಲಿಸುವ ಗುರಿ. ಬಹುರೂಪ ವೇಷ ಒಬ್ಬೊಬ್ಬರ ಬದುಕಿನ ಹೊಣೆ. ಅದನ್ನು ಅದರ ಮೂಲವನ್ನು ಅರಿಯದ ಜನಸಮುದಾಯ. ಈ ರೀತಿಯ ಬಹುರೂಪದ ಸೊಗಸನ್ನರಿಯದ ಜನತೆಯ ಬಗ್ಗೆ ವ್ಯಾಕುಲ ಪಟ್ಟಿರುವುದು, ನೊಂದುಕೊಂಡಿರುವುದು ವ್ಯಕ್ತವಾಗಿದೆ. ಇದಕ್ಕೆ 'ತೆರೆ–ಮರೆಯ ಬಹುರೂಪ' ಎಂದು ಹೆಸರಿಸಲಾಗಿದೆ.

ಬಹುರೂಪಿ ಚೌಡಯ್ಯನು ಅಲ್ಲಮಪ್ರಭುವಿನ ಅಜಗಣ್ಣನ, ಮುಖವಾಡದಯ್ಯನ ಮೊದಲಾದವರ ವೇಷತೊಟ್ಟು ಆಡುತ್ತಿದ್ದನೆಂದು ತಿಳಿದುಬರುತ್ತದೆ. ಬಸವಣ್ಣನೇ ಎನ್ನ ಬಹುರೂಪಗಳಿಗೆ ಸೂತ್ರಧಾರಿ ಎಂದು ಸ್ವತ: ಚೌಡಯ್ಯನೇ ಹೇಳಿಕೊಳ್ಳುತ್ತಾನೆ.

ಮಿತಭೋಜನ, ಮಿತವಾಕು, ಮಿತನಿದ್ರೆಯ ಮಾಡಿರಣ್ಣಾ ಎಂಬ ಸಂದೇಶವನ್ನು ಚೌಡಯ್ಯ ತನ್ನ ಬಹುರೂಪದ ಮೂಲಕ ತಿಳಿಸುತ್ತಿದ್ದನು. ಇವನ ಕಲೆಯನ್ನು ವೀಕ್ಷಿಸುತ್ತಿದ್ದ ಪ್ರೇಕ್ಷಕರು 'ಪುರ ಪುರ' ಎಂದು ಉದ್ಗಾರ ತೆಗೆದು ಧಮ್ಮು ಧಿಮ್ಮ ಭಲರೆ ಎಂದು ಬೆನ್ನು ಬಡಿಯುತ್ತಿದ್ದರು ಎಂದು ತಿಳಿದು ಬರುತ್ತದೆ.

### 4. ಡೊಂಬರಾಟ:

ಡೊಂಬರಾಟವು ಪೂರ್ಣ ಪ್ರಮಾಣದ ಶ್ರಮವನ್ನಾಶ್ರಯಿಸಿರುವ 'ಜನಪದ ಕಲಾ ಪ್ರಧಾನ' ವೃತ್ತಿಯಾಗಿದೆ. ಹೆಚ್ಚಾಗಿ ಇದು ವ್ಯಾಯಾಮದ ವಿವಿಧ ಪ್ರದರ್ಶನಗಳನ್ನೊಳಗೊಂಡಿರುತ್ತದೆ. ಡೊಂಬರಾಟದಲ್ಲಿ ಒಂದು ಕುಟುಂಬದಲ್ಲಿನ ಗಂಡ–ಹೆಂಡತಿ–ಮಕ್ಕಳು ಹಾಗೂ ಇತರ ಸಂಬಂಧಿಕರು ಭಾಗವಹಿಸುತ್ತಾರೆ. ಡೊಂಬನ ಹೆಂಡತಿಯನ್ನು ಡೊಂಬಗಿತ್ತಿ, ಡೊಂಬತಿ ಎಂದು ಕರೆದಿರುವುದು ಗೊತ್ತಾಗುತ್ತದೆ. ಜನ ಸೇರುವ

ಗ್ರಾಮದ ವಿಶಾಲವಾದ ಮೈದಾನದಲ್ಲಿ ಡೊಂಬರಾಟವನ್ನಾಡಲಾಗುತ್ತದೆ. ಅದಕ್ಕಿಂತ ಮುನ್ನ ಡಂಗುರ ಬಾರಿಸಿ ಜನರನ್ನು ಸೇರಿಸುತ್ತಾರೆ. ಆಟದಲ್ಲಿ ಢವುತೆ ಡೊಳ್ಳು ತಂಬಟದಂತಹ ಚರ್ಮವಾದ್ಯಗಳನ್ನು ಬಳಸಿ ಜನರ ಗಮನವನ್ನು ತಮ್ಮೆಡೆಗೆ ಸೆಳೆದುಕೊಳ್ಳುತ್ತಾರೆ.

ತಂತಿಯ ಮೇಲೆ ನಡೆಯುವುದು, ವಿವಿಧ ನಮೂನೆಯ ಲಾಗ ಹಾಕುವುದು, ಕಬ್ಬಿಣದ ಬಳೆಗಳ ಒಳಗೆ ನುಗ್ಗುವುದು, ಕಬ್ಬಿಣದ ಸರಳನ್ನು ಗಂಟಲಿಗೆ ತಾಕಿಸಿಕೊಂಡು ಬಗ್ಗಿಸುವುದು. ಮಗುವನ್ನು ಮೇಲಕ್ಕೆ ಬೀಸಿ ಹಿಡಿಯುವುದು, ಮಗುವನ್ನು ಮಲಗಿಸಿ ಗಳುವನ್ನು ಹಲ್ಲಿನ ಮೇಲಿಟ್ಟುಕೊಂಡು ನರ್ತಿಸುವುದು ಹೀಗೆ ಇನ್ನೂ ಮುಂತಾದ ಶಕ್ತಿ ಪ್ರಧಾನ ಹಾಗೂ ಚಮತ್ಕಾರದ ಆಟಗಳನ್ನಾಡುತ್ತಿದ್ದರು. ಆದ್ದರಿಂದಲೇ 'ಬಸವಣ್ಣನವರು ಡೊಂಬ ಕಿರಿಯನಲ್ಲ' ಎಂದು ಹೇಳಿದ್ದಾರೆ. ಹಾಗೆಯೇ ಪ್ರಪಂಚದ ಡಂಬಿನಲ್ಲಿ ಎನ್ನದೊಂದು ರೂಪು ಎನ್ನುತ್ತಾರೆ.

ಡೊಂಬರು ವೇಷವನ್ನು ಹೊತ್ತು ಊರೂರು ತಿರುಗುತ್ತಿದ್ದರು. ಬಹುರೂಪಿಗಳಂತೆ ಡೊಂಬರು ವಿವಿಧ ಆಟಗಳನ್ನು ಆಡುತ್ತಿದ್ದರು. ಅವರಂತೆ ಇವರು ವೇಷಗಳನ್ನು ಹಾಕುತ್ತಿದ್ದರು. "ವೇಷ ಎಲ್ಲಿರದು ಸೂಳೆಯಲ್ಲಿ, ಡೊಂಬನಲ್ಲಿ, ಬಹುರೂಪಿಯಲ್ಲಿ ಇರದೆ?" ಎಂಬ ಅಕ್ಕಮ್ಮನ ಮಾತಿನಲ್ಲಿ ಡೊಂಬರಾಟದವರು, ಬಹುರೂಪಿಯಾಟದವರು ಬೇರೆ ಬೇರೆಯವರು ಎಂಬುದು ಸ್ಪಷ್ಟವಾಗುತ್ತದೆ.

ಏನೇ ಇರಲಿ ಸಾಮಾನ್ಯ ಜನರು ಡೊಂಬರಾಟದಲ್ಲಿ ಆಸಕ್ತಿ ವಹಿಸುತ್ತಿದ್ದರು. ವಿವಿಧ ಪ್ರಕಾರದ ಡೊಂಬರಲಾಗ ಹೊಡೆಯುತ್ತಿದ್ದುದರಿಂದ ಇದೊಂದು ಮನೋರಂಜಕ ವೃತ್ತಿಯಾಗಿತ್ತು. ಕೆಲವು ಬೊಂಬಿನ ತಟ್ಟಿಗಳನ್ನು ನೆಟ್ಟು, ಹಗ್ಗಗಳನ್ನು ಕಟ್ಟಿ ಅದರ ಮೇಲೆ ನಡೆಯುತ್ತಿದ್ದರು. ಹೊಟ್ಟೆ ಕಕ್ಕುಲತೆಗಾಗಿ ಈ ರೀತಿಯ ಕಷ್ಟದ ಜೀವನ ನಡೆಸುತ್ತಿದ್ದರೆಂದು ಮೋಳಿಗೆ ಮಾರಯ್ಯ ತಿಳಿಸುತ್ತಾನೆ.

### 5. ಕೋಡಂಗಿಯಾಟ:

ಮಂಗದ ವೇಷಧರಿಸಿ ಮನರಂಜನೆ ಮಾಡುವ ಕಾಯಕವಿದು. ಆನಂತರ ಕೋತಿಗಳನ್ನು ಸಾಕಿ ಅವುಗಳಿಗೆ ಆಟ ಕಲಿಸಿ ಕೋತಿಯಾಟ ಆಡಿಸುವ ವೃತ್ತಿಯೂ ಇದರಲ್ಲಿಯೇ ಸೇರುತ್ತದೆ. ಕೋಡಂಗಿಯಾಟವು ಜನತೆಯನ್ನು ರಂಜಿಸುತ್ತದೆ. ಕೋಡಂಗಿಯಾಟದವರು ಅಲೆಮಾರಿ ಜನಾಂಗದವರಾಗಿದ್ದು, ಮನೆ ಮನೆಯ ಬಾಗಿಲಿಗೆ ಹೋಗಿ ಆಟ ಆಡಿಸಿ ಹಣ ಅಥವಾ ಧಾನ್ಯ ಪಡೆದು ಜೀವನ ಸಾಗಿಸುವರು. ಮನೆಯೊಡೆಯನಿಗೆ ನಮಸ್ಕಾರ ಮಾಡಿಸುವುದು. ಕೈಯಲ್ಲಿ ದೊಣ್ಣೆ ಕೊಟ್ಟು ಹೊಲ ಕಾಯುವಂತೆ ಹೇಳುವುದು, ನೀರು ತರುವುದು, ಬೀಡಿ ಸಿಗರೇಟು ಸೇದಿಸುವುದು, ಲಾಗಾ ಹಾಕುವದು, ಅಡಿಗೆ ಮಾಡುವುದು, ಚಂಡಾಟವಾಡುವುದು, ಇತ್ಯಾದಿ ಆಟಗಳನ್ನು ಕಲಿಸಿ ಪ್ರದರ್ಶಿಸುವರು.

ಕೋಲಿನ ತುದಿಯ ಮೇಲೆ ಆಡುವ ಕೋಡಗದ ಚಿತ್ರ ಅಕ್ಕಮಹಾದೇವಿಯ ವಚನದಲ್ಲಿದೆ. ಕೆಟ್ಟೆನಯ್ಯ ಚಕ್ರದಂಡದಲ್ಲಿ ಸಿಕ್ಕಿದ ಮರ್ಕಟನಂತೆ ಎಂಬ ಮೋಳಿಗೆ ಮಾರಯ್ಯನ ಮಾತು ಕೋತಿಯನ್ನಾಡಿಸಲು ಚಕ್ರದಂಡವೆಂಬ ಕೋಲನ್ನು ಬಳಸುತ್ತಿದ್ದರೆಂಬುದನ್ನು ಸಮರ್ಥಿಸುತ್ತದೆ. ಕೋಡಂಗಿ ಯಜಮಾನನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತದೆ. ಮನಷ್ಯರಂತೆ ಕೋತಿಗೂ ಅಂಗಿ, ಚೊಣ್ಣ, ಕುಲಾಯಿ ತೋಡಿಸಿ, ಶೃಂಗಾರ ಮಾಡುವರು. ಕೋತಿಯ ಚೇಷ್ಟೆ ಹಾಗೂ ಆಟ ನೋಡಿ ಜನ ಹಣ ಕೊಡುವರು.

ವಚನ ಸಾಹಿತ್ಯದಲ್ಲಿ ಕೋಡಂಗಿಯಾಟದ ಉಲ್ಲೇಖಗಳಿವೆ. ಕೋಡಂಗಿಯಾಟದವರು ಕೇಳಿದ್ದನ್ನು ಜನ ಕೊಡುತ್ತಿದ್ದರು ಎಂದು ಬಸವಣ್ಣ ಹೇಳುತ್ತಾನೆ. ಕೋಡಂಗಿಯಾದವನ ವೇಷ ಭೂಷಣವನ್ನು ಕುರಿತು ಹರಿಹರ ಹೀಗೆ ಹೇಳಿದ್ದಾನೆ. ತಲೆಗೆ ಕವಡೆಯ ದಂಡೆಗಳನ್ನು ಧರಿಸಿ, ತನ್ನ ಹಲ್ಲುಗಳಿಗೂ ಕವಡೆಗಳನ್ನು ಅಳವಡಿಸಿಕೊಳ್ಳುತ್ತಿದ್ದ. ಮೆಳ್ಳಗಣ್ಣು ಕಾಣಿಸುವಂತೆ ನಟಿಸುತ್ತಿದ್ದ. ಕೊಂಕು ನಡಿಗೆಯಿಂದ ನಡೆಯುತ್ತಾ ಮುಂಗೈ – ಮೊಳಕೈಗಳನ್ನಾಡಿಸುತ್ತ ಹಲ್ಲಿರಿಯುತ್ತ, ಹುಬ್ಬು ಕುಣಿಸಿ ಕುರುಡ–ಕುಂಟರಂತೆ ನಡೆಯುತ್ತ ತಲೆಯಿಂದ ನಡೆದಾಡುತ್ತ ನಾನಾ ಚೇಷ್ಟೆಗಳನ್ನು ಮಾಡುತ್ತಿದ್ದನು. ಕೋಡಗದ ಮಾರಣ್ಣ ಕೋಡಂಗಿ ಆಡಿಸುವುದನ್ನು ಮಾಡುತ್ತಿದ್ದನು.

"ನಿತ್ಯ ಶಿವಭಕ್ತರ ಮನೆಗೆ ಹೋಗಿ ಕೋಡಗವ ಕುಣಿಸುತ ತಂದು ಚಾರು ಜಂಗಮದ ದಾಸೋಹಂ ಮಾಡುತಿರಲಿದು ಭಕ್ತಗನುಚಿತವೆ" ಎಂದು ಕೇಶಿರಾಜ ದಣ್ಣಾಯಕನು ಆಕ್ಷೇಪಿಸಲು ಮಾರಯ್ಯ ಕೋತಿ ಕುಣಿಸುವುದನ್ನು ಬಿಟ್ಟು ಅಂಗಗಳನ್ನೇ ಕುಣಿಸಿದನೆಂದು ಗುರುರಾಜ ಚಾರಿತ್ರ್ಯ ತಿಳಿಸುತ್ತದೆ.

**ಕೋತಿ ಅವಗುಣ ಅಥವಾ ಕೆಟ್ಟ ಗುಣದ ಸಂಕೇತ. ಇದು ವಚನಕಾರರ ನಂಬುಗೆಯೂ ಆಗಿದೆ. ಇಂತಹ ಕೆಟ್ಟ ಗುಣಗಳನ್ನೇ ಬಂಧನದಲ್ಲಿಕ್ಕಿ ತಾನು ಇಚ್ಛಿಸಿದಂತೆ ಆಡಿಸಿದ ಶರಣ ಕೋಡಗದ ಮಾರಯ್ಯ.**

### 6. ಗೊಂಬೆಯಾಟ:

ವಚನಗಳಲ್ಲಿ ಸೂತ್ರದ ಬೊಂಬೆಯಾಟದ ಹಾಗೂ ತೊಗಲು ಬೊಂಬೆಯಾಟದ ಮಾಹಿತಿ ಸಿಗುತ್ತದೆ. ಕಟ್ಟಿಗೆ ಅಥವಾ ಮಣ್ಣಿನಿಂದ ತಯಾರಿಸಿದ ಗೊಂಬೆಗಳಿಗೆ ಎರಕ ಹೊಯ್ದು ಅವುಗಳಿಗೆ ವಿವಿಧ ಬಣ್ಣಗಳಿಂದ ಅಲಂಕರಿಸುತ್ತಿದ್ದರು. ಕಾಲಿಗೆ ಗೆಜ್ಜೆ ಕಟ್ಟಿ, ಅರಳಲೆಯ ಆಭರಣ ತೊಡಿಸಿ, ರಂಗಸ್ಥಳದ ಹಿಂಬದಿಯಲ್ಲಿ ಅಲಂಕಾರವಾದ ಗೊಂಬೆಗಳನ್ನು ಕುಣಿಸುತ್ತಿದ್ದರು. ಸೂತ್ರದ ಬೊಂಬೆಗೆ ಪ್ರಾಣ ಇಲ್ಲದಿದ್ದರೂ ಆಡಿಸುವ ವ್ಯಕ್ತಿ ಅದಕ್ಕೆ ಪ್ರಾಣ ನೀಡುತ್ತಾನೆಂದು ಚನ್ನಬಸವಣ್ಣ ಹೇಳಿದ್ದಾನೆ.

ಹಿನ್ನಲೆ ವಾದ್ಯ, ಪುಂಗಿ, ಮುಖವೀಣೆ, ಮೃದಂಗ, ತಾಳವನ್ನು ಉಪಯೋಗಿಸುವರು. ಗೊಂಬೆಯನ್ನು ಆಡಿಸುವಾತನಿಗೆ ಸೂತ್ರದಾರ ಎಂದು ಕರೆಯುತ್ತಾರೆ. ವಚನಗಳು ಯಂತ್ರವಾಹಕನೆಂದು ಕರೆದಿವೆ. ಸೂತ್ರಧಾರ, ಧ್ವನಿ ಗಾರುಡಿಗನೂ ಹೌದು. ಗೊಂಬೆಗಳು ಆಡಬೇಕಾದ ಮಾತು, ಗೀತೆಗಳನ್ನು ತಾನೇ ಆಡುತ್ತಾನೆ. ಗೊಂಬೆ ಆಡಿಸುವಾತನಿಗೆ ಸ್ವತಂತ್ರವಿದೆಯೇ ಹೊರತು ಗೊಂಬೆಗಳಿಗಿಲ್ಲ ಎಂದು ಸಿದ್ಧರಾಮ ತಿಳಿಸುತ್ತಾನೆ. ಸೂತ್ರದ ಗೊಂಬೆಗೆ ದಾರವೇ ಮುಖ್ಯವಾಗುತ್ತದೆ.

ಚರ್ಮವನ್ನು ಹದಗೊಳಿಸಿ, ಪಾರದರ್ಶಕ ಬಣ್ಣಗಳಿಂದಲೇ ವೇಷಭೂಷಣ ಮಾಡಿ, ರಂಗದ ಹಿಂಬದಿಯಲ್ಲಿ ಕಂಬಗಳನ್ನು ನೆಟ್ಟು, ಡೋಲು, ಪುಂಗಿ, ತಾಳ, ತುತ್ತೂರಿಗಳನ್ನು ಹಿನ್ನೆಲೆ ವಾದ್ಯಗಳಾಗಿ ಉಪಯೋಗಿಸಿ ಗೊಂಬೆಗಳನ್ನು ಕುಣಿಸುತ್ತಿದ್ದರು.

"ಚಿತ್ರ–ವಿಚಿತ್ರವಾದವನು ಜಂಗಮ ಮುಂತಾಗಿ ನೋಡದೆ ತಾ ನೋಡದನಾದಡೆ ತೊಗಲ ಬೊಂಬೆಯ ನೋಡಿದ ಸಮಾನ" ಎಂದು ಚೆನ್ನ ಬಸವಣ್ಣನ ಮಾತು. ತೊಗಲು ಬೊಂಬೆಯಾಟವನ್ನು ನೋಡುವುದು ಗೌರವಸ್ಥರಿಗೆ ತಕ್ಕುದಲ್ಲವೆಂಬ ಅರ್ಥ ಸೂಚಿಸುತ್ತದೆ. ಸೂತ್ರದಾರ

ಬೊಂಬೆಯನಾಡಿಸುವಂತೆ ದೇವರು ಮನುಷ್ಯರನ್ನು ಆಡಿಸುತ್ತಾನೆಂದು ವಚನಕಾರರು ಹೇಳಿದ್ದಾರೆ. ಜಕ್ಕೀರ ಬ್ರಹ್ಮಯ್ಯ ಮರದ ಬೊಂಬೆ ಕುಣಿಸುವ ಕಲಾವಿದನೆಂದು ತಿಳಿದುಬರುತ್ತದೆ.

**ಮರದ ಗೊಂಬೆಯ ಭಕ್ತಕಾಲಯದೊಳು ಕುಣಿಸಿ**
**ಪಿರಿದು ಕಾಯಕದಂದು ಜಂಗಮಾರ್ಚನೆ ಗೈಯ್ದು**
**ಪುರಹರನ ಕೃಪೆ ಪಡೆದ ಜಕ್ಕಿರ ಬ್ರಹ್ಮಯ್ಯ**

ಹೀಗೆ ಸೂತ್ರದ ಗೊಂಬೆಯಾಟ, ತೊಗಲು ಗೊಂಬೆಯಾಟಗಳು ಪ್ರೇಕ್ಷಕರ ಮನವನ್ನು ಆಕರ್ಷಿಸಿ ಮುದ ನೀಡುವ ಕಲಾ ಪ್ರಕಾರಗಳಾಗಿವೆ. ಮನೋರಂಜನೆಯ ಜೊತೆಗೆ ತೊಗಲು ಗೊಂಬೆಯಾಟ ಆಡಿಸಿದರೆ ಮಳೆ ಬಿದ್ದು ಸುಭಿಕ್ಷ ಉಂಟಾಗುತ್ತದೆ. ದನಗಳಿಗೆ ರೋಗ ಬರುವುದಿಲ್ಲ ಎಂಬ ಜನಪದ ನಂಬಿಕೆಗಳಿವೆ.

### 7. ಹಾವಾಡಿಗರಾಟ:

ಉಭಯವಾಸಿಯಾದ ಹಾವನ್ನು ಕಂಡು ಬಸವಣ್ಣ "ಹಾವಿನ ಡೊಂಕು ಹುತ್ತಕ್ಕೆ ಸಸಿನವೆಂದು, ಹುತ್ತವ ಬಡಿದಡೆ ಹಾವು ಸಾಯಲಾರದೆಂದು" ಹೇಳಿದ್ದಾರೆ.

ಹಾವಾಡಿಗನ ವೃತ್ತಿ ಮುಖ್ಯವಾಗಿ ಹಾವುಗಳನ್ನೇ ಅವಲಂಬಿಸಿದೆ. ಹಾವುಗಳನ್ನು ಹಿಡಿಯುವ ಕಲೆ ಹಾವಾಡಿಗನಿಗೆ ಚೆನ್ನಾಗಿ ಗೊತ್ತಿರುತ್ತದೆ. ಇನ್ನುಳಿದವರಿಗೆ ಅದು ತಿಳಿದಿರುವುದಿಲ್ಲ ಎಂದು ಹಡಪದ ಅಪ್ಪಣ್ಣ ಹೇಳುತ್ತಾನೆ. ಹಾವು ಹಾವಾಡಿಗನಿಗೆ ಮಾತ್ರ ಈಡಾಗುತ್ತಿತ್ತು. ಹಾವನ್ನು ಹಿಡಿಯುವವನು ಅದನ್ನು ನಿಶ್ಚೇತನಗೊಳಿಸಿ ತನಗದು ತೊಂದರೆಯನ್ನು ಮಾಡಲಾಗದಂತೆ ಮಾರ್ಪಡಿಸುವ ಮಂತ್ರವೊಂದನ್ನು ಕಲಿತಿರುತ್ತಿದ್ದ. ಹಾವನ್ನು ಹಿಡಿದ ಮೇಲೆ ಅದರ ವಿಷದ ಹಲ್ಲನ್ನು ತೆಗೆದು ಹಾವನ್ನು ಬುಟ್ಟಿಯಲ್ಲಿಡುತ್ತಿದ್ದರು. ಕಾಶ್ಮೀರದಲ್ಲಿ ಹಾವುಗಳನ್ನು ಚರ್ಮದ ಚೀಲದಲ್ಲಿ ಹಾಕುತ್ತಿದ್ದರು. ಈ ಚೀಲಗಳಿಂದ ಹೊರಗೆ ಸುಳಿಯಲು ಒಳಗಿನ ಹಾವುಗಳು ಪ್ರಯತ್ನಿಸುತ್ತಿದ್ದ ಚಿತ್ರವು 'ರಾಜ ತರಂಗಿಣಿ' ಯಲ್ಲಿದೆ. ಹಾವಿನ ಪೊರ ಕಳಚಿದರೂ ಅದರ ವಿಷ ನಾಶವಾಗದು. ಹಾಗೆ ಪರೆ ಕಳಚಿಕೊಂಡ ಹಾವು ಪುನರ್ಜನ್ಮ ಪಡೆಯುತ್ತದೆಂದು ಹೇಳಲಾಗುತ್ತದೆ.

ಹೀಗೆ ಹಾವು ಮತ್ತು ಹಾವಾಡಿಗನ ಚಿತ್ರಗಳು ವಚನ ಸಾಹಿತ್ಯದಲ್ಲಿ ಕಂಡು ಬಂದರೂ ಶಿವಶರಣರಲ್ಲಿ ಯಾರೂ ವೃತ್ತಿ ನಿರತ ಹಾವಾಡಿಗರು ಇದ್ದಂತೆ ಕಂಡು ಬರುವುದಿಲ್ಲ. "ಹಾವಿನ ಮಂತ್ರ ಗಾರುಡವ ತಿಳಿದಡೆ ಹಾವಿನ ಸರಸವೇ ಲೇಸು" ಎಂದು ಮೋಳಿಗೆ ಮಾರಯ್ಯ ತಿಳಿಸುತ್ತಾನೆ.

### 8. ಕೋಲೆ ಬಸವನಾಟ:

ಮೂಕ ಪ್ರಾಣಿಗಳ ಅಭಿನಯವನ್ನೇರ್ಪಡಿಸಿ ಮನೋರಂಜನೆಯನ್ನು ನೀಡುವ ಕೋಲೆ ಬಸವನಾಟವೊಂದು ಜನಪದ ಕಲೆಯಾಗಿದೆ. ಎತ್ತು/ಬಸವ ಇಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಎತ್ತನ್ನು ಚೆನ್ನಾಗಿ ಪಳಗಿಸಿ ಚಮತ್ಕಾರಯುತ ಪ್ರದರ್ಶನವನ್ನು ಬೀದಿಗಳಲ್ಲಿ ಪ್ರದರ್ಶಿಸುವ ಇವರನ್ನು ಕವಲೆತ್ತಿನವರೆಂದೂ, ಗಂಡೆತ್ತಿನವರೆಂದೂ ಕರೆಯುತ್ತಾರೆ. ಇದು ಗೊಲ್ಲರಿಗೆ ವಂಶಪಾರಂಪರ್ಯವಾಗಿ ಬಂದ ವೃತ್ತಿ. ಬಸವಣ್ಣನನ್ನೇ ತಮ್ಮ ಆರಾಧ್ಯ ಪುರುಷನೆಂದು, ಕುಲದೈವವೆಂದು ನಂಬುವ ಇವರು ಅಲೆಮಾರಿಯಾಗಿದ್ದಾರೆ. ಈ ಜನಾಂಗದವರು ದಿನಕ್ಕೊಂದು ಗ್ರಾಮವನ್ನು ಸುತ್ತಾಡಿ, ಬೀಕ್ಷೆ ಬೇಡಿ ಜೀವನ ಸಾಗಿಸುತ್ತಾರೆ.

ಬಸವನಾಟದವರು ಬಸವನ ಕೊಂಬುಗಳಿಗೆ ಬಣ್ಣ ಬಣ್ಣದ ಬಟ್ಟೆ ಸುತ್ತಿ, ಕುಂಚವಿಟ್ಟು, ಕೊರಳಲ್ಲಿ ಗಂಟೆ ಕಟ್ಟಿ ಮಣಿಸರ ಹಾಕಿ ಕಾಲುಗಳಿಗೆ ಗೆಜ್ಜೆಸರ ಕಟ್ಟಿ, ಬೆನ್ನ ಮೇಲೆ ಬಣ್ಣ ಬಣ್ಣಗಾಲ ಚಿಪ್ಪುಗಳನ್ನಿಟ್ಟು ಕಸೂತಿ ಮಾಡಿದ ಝೂಲಾ ಹಾಕಿ ನವ ವಧುವಿನಂತೆ ಶೃಂಗರಿಸಿಕೊಂಡ ಬಸವ ಆಟದವನ ನಿರ್ದೇಶನದಂತೆ ತಲೆಯಲ್ಲಾಡಿಸುತ್ತಾ ಕುಣಿಯುತ್ತದೆ. ಇದನ್ನೇ ಚೆನ್ನ ಬಸವಣ್ಣ "ಲೀಲೆಯ ಪಶು' ಎಂದು ಕರೆದಿದ್ದಾರೆ.

ಕೋಲೆ ಬಸವ ಮನೆಯೆದರು ಬಂದಾಗ ಹೆಣ್ಣು ಮಕ್ಕಳು ಅದರ ಹಣೆಗೆ ಕುಂಕುಮವಿರಿಸಿ ಹೂ ಪತ್ರೆಗಳಿಂದ ಪೂಜಿಸಿ ನಮಿಸಿ, ನೈವೇದ್ಯ ಸಲ್ಲಿಸುವರು. ಕಲಾವಿದರಿಗೆ ಧನ ಧಾನ್ಯಾದಿಗಳಾದಿಯಾಗಿ ಹಳೆಯ ಬಟ್ಟೆಯನ್ನು ಕೊಡುವರು. ಜನಪದರು ತಮ್ಮಲ್ಲಿ ಅಂಗಾಂಗಳಿಂದ ಊನವಾಗಿರುವ ಅಥವಾ ಹರಕೆಯ ಪ್ರಾಣಿಗಳನ್ನು ಕೋಲೆ ಬಸವನಾಟದವರಿಗೆ ಕೊಡುವ ಸಂಪ್ರದಾಯ ಕೂಡ ಇತ್ತು. ಅಲ್ಲದೆ ಕೋಲೆ ಬಸವನ ಹಿಂಗಾಲು–ಮುಂಗಾಲುಗಳ ನಡುವೆ ನುಸುಳಿದರೆ ಬಾಲಗ್ರಹ ದೋಷ, ಭೀತಿ, ವಿಚಿತ್ರ ವರ್ತನೆ ಮಾಯವಾಗುವುದೆಂದು ಜನಪದರು ಭಾವಿಸಿದ್ದರು.

### 9. ಕೋಲಾಟ:

ಮನೋರಂಜನೆ, ದೈವೀ ಆರಾಧನೆಯ ಹಿನ್ನೆಲೆಯುಳ್ಳ ಕೋಲಾಟ ಜನಪ್ರಿಯ ಕಲೆ, ಸಂಗೀತ, ನೃತ್ಯ ಹಾಗೂ ಸಾಹಿತ್ಯದ ಸಂಯೋಜನೆಯುಳ್ಳ ಕೋಲಾಟವು ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಕೋಲಾಟದ ಉಗಮ ಕೃಷ್ಣನೊಂದಿಗೆ ಆರಂಭವಾಗಿದೆ. ಕೃಷ್ಣ ಹುಟ್ಟಿದಾಗ ಯಾದವರು ಕೋಲಾಟವಾಡಿದುದು. ಗೋಪಿಕಾ ಸ್ತ್ರೀಯರು ಕೃಷ್ಣನೊಂದಿಗೆ ಕೋಲಾಟವಾಡಿದ ಸನ್ನಿವೇಶಗಳು ಅನೇಕ ಪುರಾಣಗಳಲ್ಲಿ ಉಕ್ತವಾಗಿವೆ. ಕೃಷ್ಣ–ಗೋಪಿಕೆಯರ ಆಟವು ಕೋಲಾಟದ ಭಾಗವಾಗಿರುವುನ್ನು ಕಾಣುತ್ತೇವೆ.

ವಚನ ಸಾಹಿತ್ಯದಲ್ಲಿ ಕೋಲಾಟದ ಬಗೆಗೆ ಮಾಹಿತಿ ಸಿಗುತ್ತದೆ. ಕೋಲಾಟ ಆಡುವವರನ್ನು ಕೋಲಾಟಿಗರೆಂದು ಕರೆದಿವೆ. ಕೊಲ್ಲಟಿಗ ಹಾಗೂ ಕೋಲಾಟಿಕ ಎಂಬ ಪ್ರಭೇಧಗಳೂ ಸಿಗುತ್ತವೆ.

ಕಥೆ, ಕಾವ್ಯ, ಹೇಳುತ್ತ ಕೋಲಾಟವನ್ನು ಪ್ರದರ್ಶಿಸುತ್ತಿದ್ದರು. ಆಡುವಾತ ಗಣಿಮಿಣಿಯಲ್ಲಿ ಕುಣಿದರೆ, ಕೆಳಗೆ ನೋಡುವಾತನಿಗೆ ಆಶ್ಚರ್ಯವಾಗುತ್ತಿತ್ತೆಂದು ಮೆರೆ ಮಿಂಡಯ್ಯ ತಿಳಿಸುತ್ತಾನೆ. ವಿವಿಧ ಪ್ರಸಂಗದ ಕೋಲಾಟದ ಕುಣಿತಗಳು ವೈಶಿಷ್ಟ್ಯ ಪೂರ್ಣವಾಗಿರುತ್ತವೆ. ಪರಂಪರೆಯ ಒಡಲಿನಲ್ಲಿರುವ ಕೋಲಾಟದ ಪ್ರದರ್ಶನಗಳು 12 ನೇ ಶತಮಾನದಲ್ಲೂ ಪ್ರಚಲಿತದಲ್ಲಿದ್ದವು ಎಂಬುದಕ್ಕೆ ವಚನಗಳೇ ಸಾಕ್ಷಿಯಾಗಿವೆ.

### 10. ನಗೆವಡಿಕರಾಟ:

ಹೊಗೆ ಇರದ ನಗೆಗೆ ಆಯುಷ್ಯವನ್ನು ವೃದ್ಧಿಸುವ ಶಕ್ತಿಯಿದೆ ಎಂದು ವೈದ್ಯ ಶಾಸ್ತ್ರವೂ ಹೇಳುತ್ತದೆ. ನಗಿಸುವ ಸಲುವಾಗಿಯೇ ಏನೆಲ್ಲ ಕಸರತ್ತುಗಳು ನಡೆಯುತ್ತಿದ್ದವು. ಮುಖವಾಡ ಧರಿಸುವುದು, ಬಣ್ಣ ಬಳಿದುಕೊಳ್ಳುವುದು, ಪ್ರಾಣಿ–ಪಕ್ಷಿಗಳ ಧ್ವನಿ ಅನುಕರಣೆ ಮಾಡುವುದು, ವಿಲಕ್ಷಣ ಕೌಪೀನ ತೊಟ್ಟುಕೊಳ್ಳುವುದು, ಹೆಜ್ಜೆ, ತಪ್ಪಿಸಿ ನಡೆಯುವುದು. ಆಂಗೀಕ ಹಾವಭಾವ ಬದಲಿಸುವುದು ಇನ್ನೂ ಮೊದಲಾದ ಕ್ರಿಯೆಗಳನ್ನು ಜರುಗಿಸಿ ನಗಿಸುತ್ತಿದ್ದ ಪ್ರಸ್ತಾಪಗಳು ಕನ್ನಡ ಸಾಹಿತ್ಯದಲ್ಲಿವೆ. ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆಯಲ್ಲಿ ನಗಿಸುವವನ ವೇಷಾಭೂಷಣಗಳ ಚಿತ್ರಣವಿದೆ.

ಸ್ವಸಂತೋಷಕ್ಕಾಗಿ ನಗುವುದು ವ್ಯಕ್ತಿಗತ ಧರ್ಮವಾದರೆ ಸಮಸ್ತ ಜನತೆಯ ಹಿತವನ್ನೇ ಲಕ್ಷದಲ್ಲಿಟ್ಟುಕೊಂಡು ನಗುವುದು ಸಮಷ್ಟಿ ಧರ್ಮವಾಗುತ್ತದೆ. ಈ ಹಿನ್ನೆಲೆಯಲ್ಲಿ ನಗಿಸುವುದನ್ನೇ ಒಂದು ವೃತ್ತಿಯನ್ನಾಗಿ ಸ್ವೀಕರಿಸಿದವರು ಕಲಿಕಂಭರಾಯ, ಬಿಬ್ಬಿ ಬಾಚಯ್ಯ ಹಾಗೂ ನಗೆಯ ಮಾರಿತಂದೆ.

ತಾವು ನಕ್ಕು ಪರರನ್ನು ನಗಿಸಿ ನಲಿಸುವುದೇ ಕಲಿಕಂಭರಾಯ, ಮಾರಿ ತಂದೆಯವರ ಉದ್ದೇಶವಾಗಿತ್ತು. ಬಿಟ್ಟಿ ಬಾಬಯ್ಯ ವಿವಿಧ ನಮೂನೆಯ ಬೊಬ್ಬೆ ಹೊಡೆದು ಶಿವಭಕ್ತರನ್ನು ನಗಿಸುತ್ತಿದ್ದನು. ನಗುವ ಸ್ವಧರ್ಮ, ನಗಿಸುವ ಪರಧರ್ಮವನ್ನು ಎತ್ತಿ ಹಿಡಿದು ದಾಸೋಹಗೈಯ್ದವರಲ್ಲಿ ನಗೆಯ ಮಾರಿ ತಂದೆಯ ಪಾತ್ರ ದೊಡ್ಡದು.

**ಈ ಹೊತ್ತ ದೇಹಕ್ಕೆ ನಗೆಯ ಚಿತ್ತದ ಕಾಯಕ**
**ಇದನೊಪ್ಪುಗೊ ಆತುರವೈರಿ ಮಾರೇಶ್ವರಾ**

**ಕೋಡಗಕ್ಕೆ ಏಡಿಸುವ ಭ್ರಾಂತು ಹುಲಿಗೆ ಹೊಯಿನ ಗದಕ**
**ಬಲಿಗೆ ಭಂಟನ ಚಿಂತೆ ಎನಗೆ ಎಲ್ಲರ ಗೆಲ್ಲುವ ಚಿಂತೆ**
**ನೀ ಕೊಟ್ಟ ಕಾಯಕ**

ಇವರೆಡು ವಚನೋಲ್ಲೇಖಗಳು ನಗೆಯ ಮಾರಿ ತಂದೆಯ ವೃತ್ತಿ–ಪ್ರವೃತ್ತಿಗಳಿಗೆ ಹಿಡಿದ ಕನ್ನಡಿಯಾಗಿದೆ. ಜನರನ್ನು ಹೇಗೆ ನಗಿಸುತ್ತಿದ್ದರೆಂಬುದಕ್ಕೆ ವಿವರಣೆಯಿದೆ. ತನುವಿನೊಳು ಭಸಿತ ಮೂಗಿನ ಕೊನೆಯೊಳಲೆವ ರುದ್ರಾಕ್ಷಿಗಳೊಲದಾಡುತ್ತಂ, ಚಂಡಿಕೆಯ ಕಿವಿಯಂ ಕೊನೆಯ ಕೊಂಕಿಸುತ್ತ, ನಾಸಿಕವಂ ಕುಣಿಸಿ, ಕಣ್ಣಂ ಮೆಳ್ಳಿಸಿ, ಹುಬ್ಬು ಕುಣಿಸಿ, ಭಕ್ತರ ನಗಿಸಿ, ಹಣ ಸಂಪಾದಿಸುತ್ತಿದ್ದರು. ಕೈ ಬಡಿದು ನಗಿಸುತ್ತಿದ್ದರು. ಬದುಕಿನ ಪ್ರತಿಯೊಂದು ಕ್ಷಣದಲ್ಲಿ ಎಲ್ಲರನ್ನು ನಗಿಸುವ ಎಲ್ಲರ ಮನಸ್ಸನ್ನು ಗೆಲ್ಲುವ ಚಿಂತೆ ಮಾರಿ ತಂದೆಗೆ.

ಹಾಸ್ಯ ಸೃಷ್ಟಿಯ ಭೂತಗನ್ನಡಿಯಲ್ಲಿ ಜನರು ನಿಸ್ಸಂಕೋಚವಾಗಿ ತಮ್ಮನ್ನು ನೋಡಿ ತಾವೇ ನೋಡಿಕೊಳ್ಳುವುದು ಬಹಳ ಸುಲಭ. ತಮ್ಮನ್ನು ನೋಡಿ ತಾವೇ ನಗುತ್ತಾರೆ. ಹಾಸ್ಯದ ಗಮ್ಯ ಉಲ್ಲಾಸ ರೋಗಿಗೆ ಪಥ್ಯವಿದ್ದಂತೆ. ಜನಕ್ಕೆ ಮನಸ್ಸು ಕುಗ್ಗಿದಾಗ ಹಾಸ್ಯ ಅದನ್ನು ಅರಳಿಸುತ್ತದೆ. ಲೋಕ ಜಡವಾದಾಗ ಹಾಸ್ಯ ಅದನ್ನು ಚೇತರಿಸುತ್ತದೆ ಎಂದರಿತ ಸಮಾಜವು ಇಂದಿಗೂ ನಗೆಯನ್ನು ಸಮರ್ಥವಾಗಿ ದುಡಿಸಿಕೊಳ್ಳುತ್ತದೆ. ನಗುವುದು ಮಾರಿತಂದೆಯ ವ್ಯಕ್ತಿತ್ವದಅಂತ:ಸತ್ವವಾದರೆ ನಗಿಸುವುದು ಅವನ ವೈನೋದಿಕ ದೃಷ್ಟಿಕೋನದ ಫಲವಾಗಿದೆ.

**ನಿನ್ನ ಒಡಗೂಡುವ ಕಡೆಯಾವುದು?**
**ಎನ್ನ ಕಾಯಕದ ಬಿಡುವಾವುದು?**
**ಅಂದಾಡಿದ ಮಾತಿನ ಕಡಿವೆಂಗ ಬಂದ ಮೊಡತದ**
**ನಗೆಯ ಕಾಯಕ ಸಂದಿತ್ತು.**

ನಗೆಯ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದು, ಡಾಂಭಿಕತನವನ್ನು ಬಯಲಿಗೆಳೆಯುವುದು, ದುರ್ಗುಣಗಳ ದುಷ್ಪರಿಣಾಮಗಳಿಗೆ ರಾವುಗನ್ನಡಿ ಹಿಡಿಯುವುದು ನಗೆಯ ಮಾರಿ ತಂದೆಯ ವೃತ್ತಿ–ಪ್ರವೃತ್ತಿಯ ಉದ್ದೇಶವಾಗಿತ್ತು. ಹಲವಾರು ವಿಡಂಬನೆಗಳ ಮೂಲಕ ಭಕ್ತರನ್ನು ನಗಿಸುವುದು ಅವರು ಮೆಚ್ಚಿಕೊಟ್ಟ ಪದಾರ್ಥಗಳಿಂದ ಜಂಗಮ ದಾಸೋಹಗೈಯ್ಯುದು ಕುಂಬಾರನಾದ ಮಾರಿ ತಂದೆಯ ನಿತ್ಯದ ನಿಯಮವಾಗಿತ್ತು. ನಗೆಯನ್ನು ಸಂದರ್ಭೋಚಿತವಾಗಿ ಬಳಸಿಕೊಂಡು, ಶಿಬಭಕ್ತರನ್ನು ಒಮ್ಮೆ ಶಿವನನ್ನು ಉಲ್ಲಸಿತಗೊಳಿಸಿದ ಕೀರ್ತಿ ನಗೆಯ ಮಾರಿತಂದೆಗೆ ಸಲ್ಲುತ್ತದೆ.

ಹೀಗೆ ನಾಡಿನ ಎಲ್ಲ ಕಡೆಗಳಲ್ಲೂ ಕಲೆ ಸಂಬಂಧಿತ ವೃತ್ತಿಯವರಿದ್ದು, ಜನತೆಯನ್ನು ಮನರಂಜಿಸುವುದೇ ಅವರ ವೃತ್ತಿಯ ಮೂಲ ಉದ್ದೇಶವಾಗಿತ್ತು. ಕಲಾಭಿಜ್ಞರ ಅಭಿಮಾನಿಗಳ ಪ್ರೋತ್ಸಾಹ ಧವಸ ಧಾನ್ಯಾಗಳಾದಿ ಉಡುಗೂರೆಯ ಬೆಂಬಲದಿಂದಾಗಿ ವಂಶ ಪಾರಂಪರ್ಯವಾಗಿ ಈ ವೃತ್ತಿಗಳು/ ಜನಪದ ಕಲೆಗಳು ಬೆಳೆದು ಬಂದವು ಎಂದು ಹೇಳಬಹುದು.

### ಆಕರ ಗ್ರಂಥಗಳು:

1. ಜಾನಪದ ಚಿಂತನ – ಡಾ. ಸಿ.ಕೆ. ನಾವಲಗಿ – 2011
2. ಸ್ನೇಹ ಜೀವಿ ಅಭಿನಂದನ ಗ್ರಂಥ – ಧರಿನಾಡು ಕನ್ನಡ ಸಂಘ, ಬೀದರ – 2006
3. ಫಲದೊಳಗಣ ರುಚಿ – ಡಾ. ಜಯಶ್ರೀ ದಂಡೆ –2001
4. ಜಾನಪದ ತೊಟ್ಟಿಲು – ಡಾ. ಹನುಮಂತರಾಯ ಬಿ.ದೊಡ್ಮನಿ – 2009
5. ಜಾನಪದ ಲೋಕ – ಡಾ. ಚೆನ್ನಣ್ಣ ವಾಲೀಕಾರ – 1993
6. ವಚನ ಸಾಹಿತ್ಯ ಸಮಿಕ್ಷೆ – ಡಾ. ವಿ.ಜಿ. ಪೂಜಾರ 2009
7. ಜನಪದ ಕಲೆ ಸಂಸ್ಕೃತಿ – ಡಾ. ಎಚ್.ಟಿ. ಪೋತೆ – 2012